ಸ|| 1909—10ನೆ ಇಸವಿ ಮಿ|| ಅರ್ಜಿ ನಂಬರ್ 125.

ಬೆಂಗಳೂರು ಸರ್ವೆ ಇಲಾಖೆಲಿ ಕಾರ್ಕೂ ಮಾಡುತ್ತಾ ಇದ್ದು ಮೃತಪಟ್ಟ ಅಂಣಾಜಿ ರಾಮಚಂದ್ರ ಯವರ ಆಸ್ತೀ ವಿಷಯದಲ್ಲಿ—

ಅರ್ಜಿದಾರರು ಲಕ್ಷ್ಮಂಬಾಯಿ ಉರಫ್ ಕೃಷ್ಣಬಾಯಿ, ಮೃತಪಟ್ಟ ಸದರಿ ಅಂಣಾಜಿ ರಾಮಚಂದ್ರ ಯವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಅಂಣಾಜಿ ರಾಮಚಂದ್ರಯವರ ಜಿಂದಗಿ ಬಗ್ಯಾಗಿ ಒರತಕ್ಕ (900) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ನಂಜನಗೂಡಿನಲ್ಲಿ ಇಂಜನೀಯರ್ ಇಲಾಖೆ ಮುನಸ್ಸಿ ಕೆ. ವೆಂಕೋಬರಾಯರ ಮಗಳು ಲಕ್ಷ್ಮಂಬಾಯಿ ಉರಫ್ ಕೃಷ್ಣಬಾಯಿ ಮೈನರ್, ಗಾರ್ಡಿಯರ್ ವೆಂಕೋಬರಾಯರ ಅರ್ಜಿಯನ್ನು 1909ನೆ ಇಸವಿ ಸೆಪ್ಟೆಂಬರ್ ತಿಂಗಳು ತಾರೀಖು 17 ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1909ನೆ ಇಸವಿ ಆಗಸ್ಟು ತಿಂಗಳು 26ನೆ ತಾರೀಖಿನಲ್ಲಿ ಕೋರ್ಟು ಮೊಹರಿ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯ್ಯರ್,
ಸಬ್ ಜಡ್ಜ್.

ಇಸ್ತಿಹಾರ್.

ತಾರೀಖು 9ನೆ ಸೆಪ್ಟೆಂಬರ್ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—

ಮೈಸೂರು ಗವರ್ನಮೆಂಟ್ ಕೃಷಿಗಲ್ ಎಕ್ಸ್‌ಪೆರಿಮೆಂಟಲ್ ಫಾರಂಗೆ ಸೇರಿದ ರಂಗಸ್ವಾಮಿಬೆಟ್ಟು, ಬಡಗಿಡ ಮತ್ತು ದೊಡ್ಡ ಮಧುರೆ ಅಮೃತಮಹಲ್ ಕಾವಲುಗಳಲ್ಲಿನ ಹುಲ್ಲು, ತಂಗಡಿ ಮತ್ತು ಕಕ್ಕೆಚಕ್ಕೆ ಸಹ 1909–10ನೆ ಸಾಲಿಗೆ ರೂಢಿಸಿಕೊಳ್ಳಲು ಇದರಡಿ ನಮೂದಿಸಿರುವ ಷರತ್ತುಗಳಿಗೊಳಪಡಿಸಿ 1909ನೆ ಸೆಪ್ಟೆಂಬರು ಮಾಹೆ 23ನೆ ಗುರುವಾರ ಮಧ್ಯಾಹ್ನ 12 ಘಂಟೆಗೆ ಎಡೆಯೂರು ಸಮ್ಮತು ದಾಸನಪುರ ಗ್ರಾಮದ ಬಳಿ ಹೆಸರಘಟ್ಟ್ಟ ಫಾರಂ ಅಸಿಸ್ಟೆಂಟರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ಡೇಟಿನಲ್ಲಿ ಹಾಜರಾಗಿ ಛಡ ಸವಾಲ್ಮಾಡಿ ಪಡೆಯಬಹುದು.

ಷರತ್ತುಗಳ ವಿವರ.

1. ಹರಾಜುದಾರನು ಕಾವಲುಗಳಲ್ಲಿರುವ ಗಿಡ, ಮರ, ಮೆಳೆ, ಮತ್ತು ಈಚಲು, ವಗೈರೆ ಯಾವದನ್ನೂ ನಾಶಪಡಿಸಕೂಡದು.

2. ಹರಾಜುದಾರನ ವಾಯಿದೆ ಒಳಗಾಗಿ ಅಂದರೆ 1910ನೆ ಏಪ್ರೆಲ್ ಆಖೈರಿನೊಳಗಾಗಿ ಕಾವಲುಗಳಲ್ಲಿ ವ್ಯವಸಾಯಕ್ಕೆ ಹೋಡಾಗಿರುವ ಯಾವ ಭಾಗದ ಜಮೀನುಗಳನ್ನಾದರು ಸರ್ಕಾರದವರು ರೈತರಿಗೆ ಹುರಳಿಸಾಗಿಗೆ ಕೊಡುತ್ತಾ ಬಂದಲ್ಲಿ ಆಯಾ ರೈತರ ಸಾಗಿಗಾಗಲಿ ಸದರಿ ಜಮೀನುಗಳಲ್ಲಿನ ದನಕರುಗಳ ಮೇವಿಗಾಗಲಿ ಹರಾಜುದಾರನು ಯಾವವಿಧವಾದ ತೊಂದರೆಯನ್ನು ಪಡಿಸಕೂಡದು. ಮತ್ತು ಅದಕ್ಕಾಗಿ ಹರಾಜುದಾರನಿಗೆ ಸರ್ಕಾರದವರಿಂದ ಯಾವವಿಧವಾದ ಪರಿಹಾರವೂ ಸಹ ದೊರೆಯಲಾರದು.

3. ಹರಾಜುದಾರನು ಮೇಲ್ಕಂಡ ಕಾವಲುಗಳಲ್ಲಿ ಕಾವಲುಗಾರನ ತಲಬು ಕಾವಲಿಗೆ ಪ್ರವೇಶ ಮಾಡಕೂಡದು.

4. ಹರಾಜುದಾರನು ದನ, ಎಮ್ಮೆ ವಗೈರೆ ರಾಸುಗಳು ಹೊರ್ತು ಆಡುಗಳನ್ನು ಕಾವಲಿಗೆ ಬಿಟ್ಟು ಮೇಯಿಸಕೂಡದು, ಅಲ್ಲದೆ ಕಾವಲಿನೊಳಗೆ ಬೀಳುವ ಸಗಣಿ ಆರಿಸಕೂಡದು.

5. ಹರಾಜುದಾರನ ವಾಯಿದೆ (1910ನೆ ಏಪ್ರೆಲ್ ಆಖೈರಿನೊಳಗಾಗಿ) ಸರ್ಕಾರಿ ರಾಸುಗಳು ಪಯಣದಮೇಲೆ ಬಂದಲ್ಲಿ ಕಾವಲಿನಲ್ಲಿ 1—2 ದಿನಗಳು ಇದ್ದು ಮುಂದಕ್ಕೆ ಹೋಗಲು ಅಡ್ಡಿಪಡಿಸಕೂಡದು.

6. ಹರಾಜುದಾರನು ಹರಾಜು ಖೈದಾದಕೂಡ್ಲೆ ನಾಲ್ಕರಲ್ಲಿ ಬಂದುಭೋಗ ಮೊಬಲಗನ್ನು ಡಿಪಾಜಟ್ಟುಬಗ್ಯೆ ಹಾಜರ್ಮಾಡಬೇಕಲ್ಲದೆ ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿನಗಳಲ್ಲಿ ಪಾವತಿಮಾಡಿ ರಶೀತಿ ಪಡೆಯತಕ್ಕದ್ದು.

7. ವಾಯಿದೆ ಅಂದರ್‌ವಾರ್ ಡಿಪಾಜಟ್ ಮೊಬಲಗು ಜಾತಾಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಲ್ಲಿ ಹರಾಜುದಾರನು ಮೇಲ್ಕಂಡ ಡಿಪಾಜಟ್ ಮೊಬಲಗು ಕಳೆದುಕೊಳ್ಳುವದಲ್ಲದೆ ದುಸರೆ ಹರಾಜು ಮಾಡಲ್ಪಡುವದರಿಂದ ಸರ್ಕಾರಕ್ಕೆ ಸಂಭವಿಸುವ ನಷ್ಟಗಳಿಗೆ ಮೊದಲು ಹರಾಜುದಾರನು ಗುರಿಯಾಗುತ್ತಾನೆ.

8. ಹರಾಜುದಾರನು ಮೊಬಲಗನ್ನು ವಾಯಿದೆಯಲ್ಲಿ ಪೂರ್ತಿ ಪಾವತಿ ಮಾಡಿದನಂತರ ಹಜರತ್ ಮಿಲಿಟೆರಿ ಸೆಕ್ರೆಟೆರಿ ಸಾಹೇಬರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ ಹರಾಜುದಾರನು ಕಾವಲಿನೊಳಗೆ ಪ್ರವೇಶಮಾಡಲು ಅಧಿಕಾರವನ್ನು ಹೊಂದುವನು.

ಷರಾ :—ರಂಗಸ್ವಾಮಿಬೆಟ್ಟದಲ್ಲಿ ಹಾಡೋನಹಳ್ಳಿ ಜೋಡೀದಾರ್ರಿಗೆ ಹಾಡೋನಹಳ್ಳಿ ಗ್ರಾಮದ ಕಡೆಗೆ ಮೊದಲೇ ಹರಾಜು ಮೂಲಕ ಕೊಟ್ಟಿರುವ ಒಂದು ನೂರು ಎಕರೆ ಜಮೀನು ವಿನಾ ಬಾಕಿ ಕಾವಲು ಹರಾಜು ಮಾಡಲ್ಪಡುತ್ತೆ.

ಹೆಚ್. ಡಾ,
ಫಾರ್ ಮಿಲಿಟೆರಿ ಸೆಕ್ರೆಟೆರಿ.